
13

ದೇವಾಸ್ತಿತ್ವವನ್ನು ನಿರಾಕರಿಸಲು ಸಾಧ್ಯವೇ?



مدرسة الصفة الإسلامية

MADRASATU SUFFAH AL ISLAMIYYA

SKYWAY COMPLEX, 6TH BLOCK, KRISHNAPURA,
SURATKAL, MANGALORE - 575 014
PH: 0824-2271449 MOB: 8722695551

ಅನಂತ ವಿಶಾಲವಾದ ಸಪ್ತಗಗನಗಳನ್ನು, ಅವುಗಳಲ್ಲಿ ಶೋಭಿಸುತ್ತಿರುವ ಸೂರ್ಯ, ಚಂದ್ರ, ನಕ್ಷತ್ರಾದಿ ಕಾಯಗಳನ್ನು, ಮುಗಿಲಿಗೆ ಮೈಯೊಡ್ಡಿ ಮಲಗಿರುವ ಪರ್ವತಗಳನ್ನು, ಅವುಗಳ ಬುಡಗಳಲ್ಲಿ ಹರಡಿಕೊಂಡಿರುವ ಕಣಿವೆಗಳನ್ನು, ದೃಷ್ಟಿಗುಂಟ ಹಬ್ಬಿಕೊಂಡಿರುವ ಸಾಗರಗಳನ್ನು, ಅವುಗಳಲ್ಲಿ ಬದುಕುತ್ತಿರುವ ಜೀವರಾಶಿಗಳನ್ನು, ಹೆಚ್ಚೇಕೆ? ನಾವು ನಮ್ಮ ದೈನಂದಿನ ಬದುಕನ್ನು ಸಾಗಿಸುತ್ತಿರುವ ಈ ಭೂಮಿಯನ್ನು, ಅದರ ಮೇಲೆ ನಮ್ಮೊಂದಿಗೆ ಭಾಗಿಯಾಗಿ ಜೀವಿಸುತ್ತಿರುವ ಅಸಂಖ್ಯ ಪ್ರಬೇಧಗಳ ಪ್ರಾಣಿ ಪಕ್ಷಿ ವೃಕ್ಷಲತಾದಿ ಚರಾಚರಗಳನ್ನು ಸೃಷ್ಟಿಸಿ ಪರಿಪಾಲಿಸುತ್ತಿರುವ ಒಬ್ಬ ಅನ್ಯೂನ ದೇವನು ನಮಗಿದ್ದಾನೆ ಎಂಬ ಪ್ರಾಥಮಿಕ ಪ್ರಜ್ಞೆಯಿಲ್ಲದ ವ್ಯಕ್ತಿ ಈ ಜಗತ್ತಿನಲ್ಲಿ ಯಾರಾದರೂ ಇದ್ದಾರೆಯೇ?

ಈ ಬೃಹತ್ ಪ್ರಪಂಚದ ನಿರ್ಮಾತೃನಾಗಿರುವ ಆ ಮಹಾನ್ ದೇವನನ್ನು ನಿರಾಕರಿಸಲು ಮನುಷ್ಯ ಮನ-

ಸ್ಸಿಗೆ ಸಾಧ್ಯವಾಗುವುದಾದರೂ ಹೇಗೆ? ಖಂಡಿತ ಸಾಧ್ಯ-ವಿಲ್ಲ! ಮನುಷ್ಯನ ಅಂತರಾಳದ ಆತ್ಮದಲ್ಲಿ ಸುಪ್ತವಾಗಿ ನೆಲೆಯೂರಿರುವ ದೈವಿಕ ಪ್ರಜ್ಞೆಯು ಪ್ರತಿಯೊಬ್ಬನ ಹೃದಯದಲ್ಲಿಯೂ ಅಂತರ್ಗತವಾಗಿರುತ್ತದೆ. ಅವನು ಅದನ್ನು ಬಹಿರಂಗವಾಗಿ ಒಪ್ಪಿಕೊಳ್ಳದಿದ್ದರೂ ಸಹ!

ದೇವಾಸ್ತಿತ್ವವನ್ನು ನಿರಾಕರಿಸುವ ವ್ಯಕ್ತಿಯು ಮೊಟ್ಟ ಮೊದಲನೆಯದಾಗಿ ಒಡ್ಡುವ ಸವಾಲು ದೇವನು ಇದ್ದರೆ ಅವನೇಕೆ ಕಾಣಲು ಸಿಗುವುದಿಲ್ಲ ಎಂದಾಗಿರು-ತ್ತದೆ. ಎಲ್ಲಾ ಪ್ರವಾದಿಗಳೊಂದಿಗೂ ಅವರ ಜನತೆಯು ಇಂತಹುದೇ ಕ್ಷುಲ್ಲಕ ಪ್ರಶ್ನೆಗಳನ್ನು ಎತ್ತಿದ್ದರು! ಈ ಕಾ-ರ್ಯವನ್ನು ಕುರ್‌ಆನ್ ಎತ್ತಿ ಹೇಳಿದೆ:

“ನಮ್ಮ ಭೇಟಿಯನ್ನು (ಅಂತ್ಯದಿನವನ್ನು ಮತ್ತು ಪರ-ಲೋಕವನ್ನು) ಬಯಸದವರು ಹೇಳಿದರು: ನಮ್ಮ ಮೇಲೆ ದೇವದೂತರೇಕೆ ಇಳಿದುಬರುವುದಿಲ್ಲ ಅಥವಾ ನಾವೇಕೆ ನಮ್ಮ ದೇವನನ್ನು ಕಾಣುವುದಿಲ್ಲ? (ಕುರ್‌ಆನ್ 25/21)

ನಿಮ್ಮ ಮಾತಿನಲ್ಲಿ ವಿಶ್ವಾಸವಿಡಬೇಕಾದರೆ ನಮಗೆ ದೇವರನ್ನು ಪ್ರತ್ಯಕ್ಷವಾಗಿ ತೋರಿಸಿ ಕೊಡಬೇಕೆಂಬ ಷರತ್ತನ್ನು ಪ್ರವಾದಿ ಮೂಸಾ(ಅ) ರೊಡನೆ ಅವರ ಜನರು ಒಡ್ಡಿದ್ದರು.

“ಓ ಮೂಸಾ, ಅಲ್ಲಾಹನನ್ನು ಪ್ರತ್ಯಕ್ಷವಾಗಿ ಕಾಣುವವರೆಗೆ ನಾವು ನಿನ್ನಲ್ಲಿ ವಿಶ್ವಾಸವಿಡುವುದಿಲ್ಲ.” (ಕುರ್‌ಆನ್ 2/55)

ಒಟ್ಟಿನಲ್ಲಿ ಇದು ಆಧುನಿಕ ವೈಜ್ಞಾನಿಕ ಸಂಶೋಧನೆಗಳಿಂದ ಉನ್ಮತ್ತನಾದ ಹತ್ತೊಂಬತ್ತನೇ ಅಥವಾ ಇಪ್ಪತ್ತನೇ ಶತಮಾನದ ನಾಸ್ತಿಕನ ಪ್ರಶ್ನೆಯಲ್ಲ. ಬದಲಾಗಿ ಹಲವು ಶತಮಾನಗಳ ಹಿಂದಿನಿಂದಲೇ ಉನ್ಮಾದಗೊಂಡ ಪ್ರತಿಯೊಂದು ಮನುಷ್ಯನ ಮನಸ್ಸಿನ ಪ್ರಶ್ನೆಯಾಗಿತ್ತು! ಐಹಿಕ ಸಂಪತ್ತು ಅಥವಾ ವಿಜ್ಞಾನವು ತನ್ನ ಬಳಿ ಸಮೃದ್ಧವಾದಾಗ, ಅದರಿಂದ ತಾನು ಏನನ್ನು ಬೇಕಾದರೂ ಸಾಧಿಸುವೆನೆಂಬ ಹುಚ್ಚು ಉತ್ಸಾಹವು ಮನುಷ್ಯನ ಮನಸ್ಸಿನಲ್ಲಿ ನೆಲೆಯೂರಿದಾಗ ಅವನು ಪ್ರತಿಬಾರಿಯೂ ತನ್ನ

ಸೃಷ್ಟಿಕರ್ತನನ್ನು ನಿರಾಕರಿಸಿದ್ದಾನೆ. ಇತಿಹಾಸವೇ ಇದಕ್ಕೆ ಸಾಕ್ಷಿಯಾಗಿದೆ.

"ಪ್ರಾಚೀನ ಕಾಲದ ದೇವನು ಸತ್ತು ಹೋಗಿದ್ದಾನೆ, ಅವನನ್ನು ಮುಗಿಸಿದ್ದು ನಾವೇ" ಎಂದು ಅಹಂಕಾರದ ಮಾತನ್ನು ಹೇಳಿದ ಜರ್ಮನ್ ತತ್ವಚಿಂತಕ ನಿಷೇ (Neitzche), "ದೇವನಿದ್ದರೆ ಅವನು ಸಿಡಿಲು ಮಿಂಚುಗಳನ್ನು ಕಳುಹಿಸಿ ನನ್ನನ್ನು ಕೊಂದು ಹಾಕಲಿ" ಎಂದು ಧಿಕ್ಕಾರದಿಂದ ಗರ್ಜಿಸಿದ ಫ್ರೆಂಚ್ ಕ್ರಾಂತಿಯ ನಾಯಕರಲ್ಲಿ ಪ್ರಮುಖನಾದ ಚಾವ್‌ಮೆಟ್ (Chaumette) ಮುಂತಾದವರು ಇದಕ್ಕೆ ಕೆಲವು ಉದಾಹರಣೆಗಳು ಮಾತ್ರ.

ಶತಮಾನಗಳ ಹಿಂದಿನ ಉನ್ಮತ್ತ ಮನಸ್ಸುಗಳಿಂದ ಹರಿದು ಬಂದ ಅದೇ ಧಿಕ್ಕಾರದ ಮಾತುಗಳನ್ನು ಆಧುನಿಕ ಮನುಷ್ಯನು ತನ್ನ ವೈಜ್ಞಾನಿಕ ಸಾಧನೆಗಳ ಉನ್ಮಾದದಿಂದ ತದ್ರೂಪವಾಗಿ ಅನುಕರಿಸಿದ್ದಾನೆ. ತನ್ನ ಪರಿಮಿತ ವೈಜ್ಞಾನಿಕ ಉಪಕರಣಗಳನ್ನು ಬಳಸಿ ಭೂ-

ಮಿಯನ್ನೊಂದಾವರ್ತಿ ಸುತ್ತಿ ಬಂದ ರಷ್ಯಾದ ಖಗೋಳ ಯಾತ್ರಿಯೊಬ್ಬ ಧಿಕ್ಕಾರದಿಂದ ಹೇಳುತ್ತಾನೆ: "ನಾನು ದೇವನನ್ನು ಎಲ್ಲ ಕಡೆಯೂ ಹುಡುಕಿದೆ, ಆದರೆ ಅವನು ನನಗೆಲ್ಲೂ ದೊರಕಲಿಲ್ಲ."

ಹಾಗಾದರೆ ಕಣ್ಣಿಗೆ ಕಾಣದ ವಸ್ತುಗಳೆಲ್ಲವೂ ಅಸತ್ಯವೇ? ವಿಜ್ಞಾನಕ್ಕೆ ವಿರುದ್ಧವೇ? ಖಂಡಿತವಾಗಿಯೂ ಅಲ್ಲ. ಕಣ್ಣಿಗೆ ಗೋಚರಿಸದ ಅನೇಕ ವಿದ್ಯಮಾನಗಳನ್ನು ಕಣ್ಣಿಗೆ ಗೋಚರಿಸುವ ವಿದ್ಯಮಾನಗಳಂತೆಯೇ ನಂಬಬೇಕಾದುದು ಕಡ್ಡಾಯವಾಗಿದೆ ಎಂಬುದನ್ನು ವಿಜ್ಞಾನವು ದೃಢೀಕರಿಸಿದೆ. ಉದಾಹರಣೆಗೆ ಕಾಂತಶಕ್ತಿ, ವಿದ್ಯುತ್‌ಶಕ್ತಿ, ಅಣುಶಕ್ತಿ ಇತ್ಯಾದಿಗಳನ್ನು ಕಣ್ಣಿನ ಸಹಾಯದಿಂದ ನೋಡಲು ಸಾಧ್ಯವೇ ಇಲ್ಲ. ಆದರೂ ಕೂಡ ನಾಸ್ತಿಕವಾದಿಗಳ ಸಹಿತ ಎಲ್ಲರೂ ಇವುಗಳಲ್ಲಿ ನಂಬಿಕೆಯಿಡುತ್ತಾರೆ!

ಅದೇ ರೀತಿ ಪ್ರೀತಿ, ಮಮತೆ, ವಾತ್ಸಲ್ಯ, ಕೋಪ, ದುಃಖ, ದುಗುಡ, ದುಮ್ಮಾನ, ಹೆಚ್ಚೇಕೆ ಭೌತಿಕವಾದಿಗಳಲ್ಲಿ

ಅತಿಹೆಚ್ಚಾಗಿ ಕಂಡುಬರುವ ಖಿನ್ನತೆ (Depression) ಇತ್ಯಾದಿಗಳನ್ನು ಕಣ್ಣಿನ ಮೂಲಕ ನೋಡಿದವರು ಈ ಜಗತ್ತಿನಲ್ಲಿ ಯಾರಾದರೂ ಇದ್ದಾರೆಯೇ? ಆದರೂ ಕೂಡ ಅವರು ಇದನ್ನು ನಿರಾಕರಿಸುವುದಿಲ್ಲ. ಯಾವ ಮನಸ್ಸಿನಲ್ಲಿ ದೇವಾಸ್ತಿತ್ವವನ್ನು ನಿರಾಕರಿಸುವಂತಹ ದುಷ್ಟ ಚಿಂತನೆಯು ಉದ್ಭವವಾಗುತ್ತದೋ ಆ ಮನಸ್ಸನ್ನು ನಾಸ್ತಿಕನು ಯಾವತ್ತಾದರೂ ಕಣ್ಣಿನಿಂದ ನೋಡಿದ್ದುಂಟೇ? ಹಾಗಾದರೆ ಮನುಷ್ಯನಿಗೆ ಮನಸ್ಸೇ ಇಲ್ಲ ಎಂದು ನಾಸ್ತಿಕವಾದಿಗಳು ಯಾಕೆ ಹೇಳುತ್ತಿಲ್ಲ?

ಕಾಂತಶಕ್ತಿ, ವಿದ್ಯುತ್‌ಶಕ್ತಿ, ಅಣುಶಕ್ತಿ ಇತ್ಯಾದಿಗಳನ್ನು ನಾವು ಕಣ್ಣಿನಿಂದ ನೋಡದಿದ್ದರೂ ಕೂಡ ಅವುಗಳ ಮೂಲಕ ಉಂಟಾಗುವ ಫಲಿತಾಂಶಗಳಿಂದ ನಾವು ಅವುಗಳನ್ನು ಕಾಣುತ್ತಿದ್ದೇವೆ ಎಂದು ನಾಸ್ತಿಕರು ಉತ್ತರಿಸಬಹುದು! ಅದೇ ರೀತಿ ಪ್ರೀತಿ, ಮಮತೆ ಇತ್ಯಾದಿಗಳನ್ನು ಕೂಡ ನಾವು ಕಣ್ಣಿನಿಂದ ನೋಡಲಾಗದಿದ್ದರೂ ನಮ್ಮ-

ಲ್ಲುಂಟಾಗುವ ದೈಹಿಕ ವ್ಯತ್ಯಾಸಗಳಿಂದ ನಾವು ಅವುಗಳ ಅಸ್ತಿತ್ವವನ್ನು ಕಂಡುಕೊಳ್ಳುತ್ತೇವೆ ಎಂದು ಅವರು ಸಮ-ಜಾಯಿಷಿ ಹೇಳಬಹುದು!

ಆದರೆ ಇದೇ ತತ್ವವನ್ನು ಬಳಸಿ ಅವರೇಕೆ ದೇವಾಸ್ತಿ-ತ್ವವನ್ನು ಕಂಡುಕೊಳ್ಳುವುದಿಲ್ಲ ಎನ್ನುವುದು ಮಾತ್ರ ವಿಚಿತ್ರವಾಗಿದೆ. ಮೇಲೆ ಉಲ್ಲೇಖಿಸಿದ ಸತ್ಯಗಳನ್ನು ಕಂ-ಡುಕೊಳ್ಳಲು ನಾಸ್ತಿಕರು ಯಾವ ತತ್ವವನ್ನು ಬುನಾ-ದಿಯಾಗಿಟ್ಟುಕೊಳ್ಳುತ್ತಾರೋ ಅದೇ ತತ್ವವನ್ನು ಬಳಸಿ ಅಲ್ಲಾಹನ ಅಸ್ತಿತ್ವವನ್ನು ಕಂಡುಕೊಳ್ಳಬೇಕೆಂದು ಮನುಷ್ಯ ಸಮೂಹಕ್ಕೆ ಕುರ್‌ಆನ್ ಕರೆ ನೀಡುತ್ತದೆ. ಕುರ್‌ಆನ್ ಈ ತತ್ವವನ್ನು ಬಸೀರಃ (ಒಳದೃಷ್ಟಿ) ಎಂದು ಕರೆದಿದೆ.

ತನ್ನ ಅನುಪಮವಾದ ವಿಷಯ ಪ್ರತಿಪಾದನಾ ಶೈಲಿ-ಯನ್ನು ಬಳಸಿ ಕುರ್‌ಆನ್ ಅವರೊಂದಿಗೆ ಕೇಳುತ್ತದೆ: ಮರುಭೂಮಿಯಲ್ಲಿ ದಿನಗಟ್ಟಲೆ ಸಂಚರಿಸುತ್ತಾ ಒಂದು ತೊಟ್ಟು ನೀರನ್ನೂ ಸ್ಪರ್ಷಿಸದೆ ಬದುಕುಳಿಯುವ ಮರು-

ಭೂಮಿಯ ಹಡಗೆಂದು (ship of the desert) ಕರೆಯಲಾಗುವ ಒಂಟೆಯ ಬಗ್ಗೆ ನೀವು ಆಲೋಚಿಸುವುದಿಲ್ಲವೇ? ಅದು ಹೇಗೆ ಸೃಷ್ಟಿಸಲ್ಪಟ್ಟಿದೆಯೆಂದು? ಸಹಸ್ರ ಸಹಸ್ರ ಸಂಖ್ಯೆಯಲ್ಲಿರುವ ಗ್ಯಾಲೆಕ್ಸಿಗಳನ್ನೂ ಕ್ಷೀರಪಥಗಳನ್ನೂ ವಹಿಸಿಕೊಂಡಿರುವ ದಿಗಂತದ ಕಡೆಗೆ ಅವರು ನೋಡುವುದಿಲ್ಲವೇ? ಅದನ್ನು ಹೇಗೆ ಎತ್ತರಿಸಲಾಗಿದೆಯೆಂದು? ಭೂಮಿಯ ಮೇಲೆ ಸಮತೋಲನವಿಲ್ಲದೆ ವ್ಯತ್ಯಸ್ತ ಪ್ರದೇಶಗಳಲ್ಲಿದ್ದರೂ ಕೂಡ ಅಲುಗಿಹೋಗದಿರುವ ಬೃಹತ್ ಗಾತ್ರದ ಪರ್ವತಗಳ ಕಡೆಗೆ ಅವರು ನೋಡುವುದಿಲ್ಲವೇ? ಅವುಗಳನ್ನು ಹೇಗೆ ನಾಟಿ ನಿಲ್ಲಿಸಲಾಗಿದೆಯೆಂದು? ಭೂಮಿಯು ತಾಸಿಗೆ 1,07,218 ಕಿ.ಮೀ. ವೇಗದಲ್ಲಿ ಸೂರ್ಯನನ್ನು ಸುತ್ತುತ್ತಿದ್ದರೂ ಕೂಡ ಅವರು ಅದರಿಂದ ಅಂತರಿಕ್ಷಕ್ಕೆ ಎಸೆಯಲ್ಪಡದಿರುವುದನ್ನು ಅವರು ನೋಡುವುದಿಲ್ಲವೇ? ಭೂಮಿಯನ್ನು ಹೇಗೆ ವಿನ್ಯಾಸಗೊಳಿಸಲ್ಪಟ್ಟಿದೆಯೆಂದು?

“ಅವರು ಒಂಟೆಯ ಕಡೆಗೆ ನೋಡುವುದಿಲ್ಲವೇ, ಅದನ್ನು ಹೇಗೆ ಸೃಷ್ಟಿಸಲಾಗಿದೆಯೆಂದು? ಆಕಾಶದ ಕಡೆಗೆ ನೋ-ಡುವುದಿಲ್ಲವೇ? ಅದನ್ನು ಹೇಗೆ ಎತ್ತರಿಸಲಾಗಿದೆಯೆಂ-ದು? ಪರ್ವತಗಳ ಕಡೆಗೆ ನೋಡುವುದಿಲ್ಲವೇ? ಅವುಗ-ಳನ್ನು ಹೇಗೆ ನಾಟಿ ನಿಲ್ಲಿಸಲಾಗಿದೆಯೆಂದು? ಭೂಮಿಯ ಕಡೆಗೆ ನೋಡುವುದಿಲ್ಲವೇ? ಅದನ್ನು ಹೇಗೆ ವಿಸ್ತರಿಸಲಾ-ಗಿಟ್ಟಿದೆಯೆಂದು? (ಕುರ್‌ಆನ್ 88/17-20)

ಆದ್ದರಿಂದ ಅಲ್ಲಾಹು ಕಣ್ಣಿಗೆ ಕಾಣುವುದಿಲ್ಲ ಎಂಬ ಕಾರಣವು ಅವನ ಅಸ್ತಿತ್ವ ನಿರಾಕರಣೆಗೆ ಪರ್ಯಾಪ್ತ-ವಲ್ಲ. ಏಕೆಂದರೆ ಕಣ್ಣಿಗೆ ಕಾಣಲು ಸಾಧ್ಯವಾಗದ ಅನೇಕ ವಸ್ತುಗಳನ್ನು ವಿಜ್ಞಾನವು ದೃಢೀಕರಿಸಿದೆ. ಮನುಷ್ಯನ ಕಣ್ಣಿಗೆ ಪರಿಮಿತಿಗಳಿವೆ. ಈ ಪ್ರಪಂಚದಲ್ಲಿರುವ ಎಲ್ಲವ-ನ್ನೂ ಕಾಣಲು ಕಣ್ಣಿಗೆ ಸಾಧ್ಯವಿಲ್ಲ. ತಾನು ಕೈಯಲ್ಲಿ ಹಿ-ಡಿದಿರುವ ರಿಮೋಟ್ ಕಂಟ್ರೋಲ್ ತನ್ನ ಮುಂದಿರುವ ಟಿ. ವಿ. ಯನ್ನು ನಿಯಂತ್ರಿಸಲು ಬಳಸುವ ಇನ್ಫ್ರಾರೆಡ್

ಕಿರಣ (infrared rays) ಗಳನ್ನು ಕಾಣಲು ನಮ್ಮಿಂದ ಸಾಧ್ಯವಾಗುವುದಿಲ್ಲ. ಅತಿನೇರಳೆ ಕಿರಣ (ultra violet rays) ಗಳನ್ನೋ, ಎಕ್ಸ್ ಕಿರಣ (x rays) ಗಳನ್ನೋ, ರೇಡಿಯೋ ತರಂಗಗಳನ್ನೋ ನೋಡಲು ನಮಗೆ ಸಾಧ್ಯ-ವಾಗುವುದಿಲ್ಲ. ಆದರೂ ನಾವು ಅವುಗಳನ್ನು ನಿರಾಕರಿ-ಸುವುದಿಲ್ಲ. ಪ್ರಪಂಚದಲ್ಲೇ ಇರುವ ಅನೇಕ ವಸ್ತುಗಳನ್ನು ನಮಗೆ ಕಾಣಲು ಸಾಧ್ಯವಿಲ್ಲವೆಂದ ಮೇಲೆ ಪ್ರಪಂಚಾ-ತೀತನಾದ ಅಲ್ಲಾಹನನ್ನು ನಾವು ಕಾಣುವುದಾದರೂ ಹೇಗೆ?

ಇನ್ನು ಭೂಮಿಯನ್ನೊಂದಾವರ್ತಿ ಸುತ್ತಿದೊಡನೆ ಅಲ್ಲಾಹನನ್ನು ನೋಡಲು ಸಾಧ್ಯವೇ? ಇಲ್ಲ. ಏಕೆಂದರೆ ಅಲ್ಲಾಹು ಪ್ರಪಂಚಾತೀತನು. ಈ ಪ್ರಪಂಚದ ವಿಸ್ತೀ-ರ್ಣದ ಕುರಿತು ವಿಜ್ಞಾನವು ಇನ್ನೂ ಕೂಡ ಸ್ಪಷ್ಟವಾದ ನಿ-ರ್ಧಾರಕ್ಕೆ ಬಂದಿಲ್ಲ. ಸೂರ್ಯನನ್ನು ಹೊರತುಪಡಿಸಿದರೆ ಭೂಮಿಗೆ ಅತಿಹತ್ತಿರದಲ್ಲಿರುವ ಪ್ರೊಕ್ಸಿಮಾ ಸೆಂಟೂರಿ

(Proxima Centauri) ಎಂಬ ನಕ್ಷತ್ರವು ನಮ್ಮಿಂದ 4.2 ಬೆಳಕಿನ ವರ್ಷ (light year) ಗಳಷ್ಟು ದೂರದಲ್ಲಿದೆ. ಬೆಳಕು ಒಂದು ಸೆಕೆಂಡಿಗೆ 2,99,792.5 ಕಿ. ಮೀ. ವೇಗದಲ್ಲಿ ಚಲಿಸಿದರೆ ಅದು ಒಂದು ವರ್ಷದಲ್ಲಿ ಕ್ರಮಿಸುವ ದೂರ 94,60,53,75,32,460 ಕಿ. ಮೀ.ಗಳಾಗಿವೆ. ಇದನ್ನು ಒಂದು ಬೆಳಕಿನ ವರ್ಷ ಎಂದು ಕರೆಯಲಾಗುತ್ತದೆ. ಮನುಷ್ಯನು ಸೆಕೆಂಡಿಗೆ 100 ಕಿ. ಮೀ. ವೇಗದಲ್ಲಿ ಚಲಿಸಿದರೂ ಒಂದು ಬೆಳಕಿನ ವರ್ಷವನ್ನು ಕ್ರಮಿಸಲು ಅವನಿಗೆ 94,60,53,75,324.6 ವರ್ಷಗಳು ಬೇಕು. ಹಾಗಾದರೆ 4.2 ಬೆಳಕಿನ ವರ್ಷಗಳನ್ನು ಕ್ರಮಿಸಲು 3,97,34,25,76,363 ವರ್ಷಗಳು ಬೇಕು! ಮನುಷ್ಯನು ಸರಾಸರಿ ನೂರು ವರ್ಷ ಬದುಕಿದರೆ ಪ್ರೊಕ್ಸಿಮಾ ಸೆಂಟೂರಿಯನ್ನು ತಲುಪಲು ಅವನಿಗೆ 3,97,34,25,763 ಜನ್ಮಗಳು ಬೇಕಾಗಿವೆ!! ಭೂಮಿಗೆ ಅತಿಹತ್ತಿರವಿರುವ ಒಂದು ನಕ್ಷತ್ರದ ಕಥೆ ಇದಾದರೆ ಮನುಷ್ಯನ ಊಹೆಗೂ

ನಿಲುಕದ ಈ ಪ್ರಪಂಚಕ್ಕೆ ಅತೀತನಾಗಿರುವ ಅಲ್ಲಾಹನನ್ನು ಭೇಟಿಯಾಗಲು ಈ ಅರುವತ್ತು ಅಥವಾ ಎಪ್ಪತ್ತು ಅಥವಾ ಹೆಚ್ಚೆಂದರೆ ನೂರು, ನೂರ ಇಪ್ಪತ್ತು ವರ್ಷಗಳಷ್ಟು ಕಾಲ ಮಾತ್ರ ಬಾಳಿ ಬದುಕುವ ಬಡಕಲು ಮನುಷ್ಯನಿಗೆ ಸಾಧ್ಯವಾಗುವುದಾದರೂ ಹೇಗೆ?

ಅಲ್ಲಾಹನನ್ನು ಕಾಣುವ ಕುರಿತು ಕುರ್‌ಆನ್ ಹೇಳಿದ್ದು ಎಷ್ಟು ಮಾರ್ಮಿಕವಾಗಿದೆ!

"ದೃಷ್ಟಿಗಳು ಅವನನ್ನು ತಲುಪುವುದಿಲ್ಲ. ಆದರೆ ಅವನು ದೃಷ್ಟಿಗಳನ್ನು ತಲುಪುತ್ತಾನೆ. ಅವನು ಅತ್ಯಂತ ಮಮತೆಯುಳ್ಳವನೂ ಸೂಕ್ಷ್ಮಜ್ಞಾನಿಯೂ ಆಗಿದ್ದಾನೆ." (ಕುರ್‌ಆನ್ 6/103)

ಸರ್ವ ವೈಜ್ಞಾನಿಕ ತತ್ವಗಳನ್ನೂ ಸಿದ್ಧಾಂತಗಳನ್ನೂ ಬದಿಗಿಟ್ಟು ಸತ್ಯವನ್ನು ಕಂಡುಕೊಳ್ಳಬೇಕೆಂಬ ಏಕೈಕ ನಿಷ್ಕಲ್ಮಶ ಮನಸ್ಸಿನೊಂದಿಗೆ ಒಳದೃಷ್ಟಿಯನ್ನು ಬಳಸಿ ಆಲೋಚಿಸಿರಿ.

ಆಗ ದೇವಾಸ್ತಿತ್ವವು ನಿಮ್ಮ ಮುಂದೆ ಹಗಲ ಬೆಳಕಿನಷ್ಟೇ ಸ್ಪಷ್ಟವಾಗಿ ಹೊಳೆಯುತ್ತದೆ. ಟ್ರಾಫಿಕ್ ಲೈಟ್‌ಗಳಿದ್ದರೂ ಸಹ, ಹೋಗುವುದಕ್ಕೂ ಬರುವುದಕ್ಕೂ ಬೇರೆ ಬೇರೆ ರಸ್ತೆಗಳಿದ್ದರೂ ಸಹ, ಹೆಚ್ಚೆಂದರೆ ಗಂಟೆಗೆ ಕೇವಲ 120 ಅಥವಾ 150 ಕಿ. ಮೀ. ವೇಗದಲ್ಲಿ ಚಲಿಸುವ ವಾಹನ-ಗಳು ಪರಸ್ಪರ ಡಿಕ್ಕಿ ಹೊಡೆದು ದಾರುಣ ಸಾವುಗಳುಂಟಾ-ಗುವುದನ್ನು ನಾವು ದಿನನಿತ್ಯ ಕಾಣುತ್ತಲೂ ಕೇಳುತ್ತಲೂ ಇದ್ದೇವೆ. ಆದರೆ ಆಕಾಶದಲ್ಲಿರುವ ಬೃಹತ್ ಕಾಯಗಳು ಸಹಸ್ರಾರು ವರ್ಷಗಳಿಂದ ತಾಸಿಗೆ ಲಕ್ಷಗಟ್ಟಲೆ ಕಿ. ಮೀ. ವೇಗದಲ್ಲಿ ಚಲಿಸುತ್ತಿದ್ದರೂ ಒಂದನ್ನೊಂದು ಸ್ಪರ್ಶಿಸದೆ ತಮ್ಮ ನಿಗದಿತ ಪಥದಲ್ಲಿ ನಿಗದಿತ ವೇಗದಲ್ಲಿ ಅತ್ಯಂತ ನಿ-ಖರವಾಗಿ ಚಲಿಸುವಂತೆ ಮಾಡಿದ್ದು ಯಾರು? ಭೂಮಿ ಸೂರ್ಯನಿಂದ 15,00,00,000 ಕಿ. ಮೀ. ದೂರದಲ್ಲಿ-ದ್ದು ತಾನು ಸುತ್ತುತ್ತಿರುವ ನಿಗದಿತ ಪಥದಿಂದ ಒಂದು ಕಿ.ಮೀ.ನಷ್ಟು ಸೂರ್ಯನಿಗೆ ಹತ್ತಿರವಾದರೆ ಭೂಮಿಯ-

ಲ್ಲಿರುವುದೆಲ್ಲವೂ ಸುಟ್ಟು ಕರಕಲಾಗುವಷ್ಟು ಉಷ್ಣವೂ, ಒಂದು ಕಿ.ಮೀ.ನಷ್ಟು ಸೂರ್ಯನಿಂದ ದೂರವಾದರೆ ಭೂಮಿಯಲ್ಲಿರುವುದೆಲ್ಲವೂ ಹಿಮಗಟ್ಟಿ ಹೋಗುವಷ್ಟು ಚಳಿಯೂ ಉಂಟಾಗದ ರೀತಿಯಲ್ಲಿ ಈ ಭೂಮಿಯನ್ನು ಅದರ ನಿಗದಿತ ಸ್ಥಾನದಲ್ಲಿ ಸುತ್ತುವಂತೆ ನಿರ್ದೇಶಿಸಿದ್ದು ಯಾರು? ನಾವೇಕೆ ಈ ಬಗ್ಗೆ ಆಲೋಚಿಸುತ್ತಿಲ್ಲ?

"ರಾತ್ರಿ ಮತ್ತು ಹಗಲನ್ನು, ಸೂರ್ಯ ಮತ್ತು ಚಂದ್ರನನ್ನು ಸೃಷ್ಟಿಸಿದ್ದು ಅಲ್ಲಾಹು. ಅವೆಲ್ಲವೂ (ಅವುಗಳ) ನಿಶ್ಚಿತ ಪಥಗಳಲ್ಲಿ ಚಲಿಸುತ್ತಿವೆ." (ಕುರ್‌ಆನ್ 21/33)

"ಸೂರ್ಯನಿಗೆ ಚಂದ್ರನನ್ನು ಮುಟ್ಟಲು ಸಾಧ್ಯವಿಲ್ಲ, ರಾತ್ರಿಯು ಹಗಲಿಗಿಂತ ಮುಂಚೆ ಬರುವುದಿಲ್ಲ. ಅವೆಲ್ಲ-ವೂ (ತಮ್ಮ) ನಿಶ್ಚಿತ ಪಥಗಳಲ್ಲಿ ಚಲಿಸುತ್ತಿವೆ." (ಕುರ್‌ಆನ್ 36/40)

ವಿಜ್ಞಾನವು ಮನುಷ್ಯನಲ್ಲಿ ಚಿಂತನಾಶೀಲತೆಯನ್ನು

ಬಡಿದೆಬ್ಬಿಸುತ್ತದೆಯೆಂಬ ಮಾತು ನೂರಕ್ಕೆ ನೂರು ಸತ್ಯವೆಂದು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಹಾಗಿರುತ್ತಿದ್ದರೆ ಜಗತ್ತಿನಲ್ಲಿರುವ ವಿಜ್ಞಾನಿಗಳೆಲ್ಲರೂ ಏಕದೇವ ವಿಶ್ವಾಸಿ-ಗಳಾಗಬೇಕಿತ್ತು! ನಾಸ್ತಿಕರೋ ಬಹುದೇವ ವಿಶ್ವಾಸಿಗಳೋ ಆಗಬಾರದಾಗಿತ್ತು! ಏಕೆಂದರೆ ಈ ಜಗತ್ತಿನಲ್ಲಿರುವ ಸರ್ವ ಸೃಷ್ಟಿಯೂ ಅಲ್ಲಾಹನ ಅಸ್ತಿತ್ವವನ್ನು ಮತ್ತು ಏಕತ್ವವನ್ನು ಸಾರಿ ಹೇಳುತ್ತಿದೆ. ಸಹಸ್ರಾರು ವರ್ಷಗಳಿಂದ ನಿರಂತರ-ವಾಗಿ ಉರಿಯುತ್ತಿದ್ದರೂ ಕೂಡ ಇಂಧನವು ಮುಗಿದು ಹೋಗದ ಸೂರ್ಯ, ಸೂರ್ಯನ ಬೆಳಕನ್ನು ಪ್ರತಿಫಲಿ-ಸುತ್ತಾ ಹೊನ್ನ ಬಟ್ಟಲಂತೆ ಬೆಳಗುವ ಚಂದ್ರ, ಚಂದ್ರನು ತನ್ನ ಪೂರ್ಣ ರೂಪವನ್ನು ಪ್ರದರ್ಶಿಸಿದಾಗ ಉಬ್ಬುವ ಆಳವಾದ ಸಾಗರಗಳು, ಯಾವುದೇ ಯಂತ್ರವನ್ನು ಅಳವಡಿಸಿಕೊಳ್ಳದೆ ಸಾಗರದಲ್ಲಿ ಸದಾ ಈಜಾಡುತ್ತಿ-ರುವ ಮತ್ಸ್ಯಗಳು, ಸಬ್‌ಮೆರೈನ್‌ಗಿಂತಲೂ ವೇಗವಾಗಿ ನೀರನ್ನು ಸೀಳುತ್ತಾ ಮುನ್ನುಗ್ಗುವ ಬೃಹತ್ ಗಾತ್ರದ

ಮೀನುಗಳು, ನೀರಿನಲ್ಲೂ ನೆಲದಲ್ಲೂ ಬದುಕುವಂತೆ ವಿಶೇಷವಾಗಿ ವಿನ್ಯಾಸಗೊಳಿಸಲ್ಪಟ್ಟ ಪ್ರಾಣಿಗಳು, ಎಂಜಿನ್‌ಗಳಿಲ್ಲದೆ ಮುಗಿಲಿನಲ್ಲಿ ಹಾರಾಡುವ ಪಕ್ಷಿಗಳು, ಮುಗಿಲನ್ನು ಚುಂಬಿಸುವಷ್ಟು ಎತ್ತರವಾಗಿರುವ ಪರ್ವತಗಳು, ಅವುಗಳಿಂದ ಹರಿದು ಬಂದು ಸಮುದ್ರ ಸೇರುವ ನದಿಗಳು, ದಟ್ಟವಾದ ಅರಣ್ಯಗಳು, ಅವುಗಳಲ್ಲಿ ಜೀವಿಸುತ್ತಿರುವ ಅನೇಕ ತರಹದ ಪ್ರಾಣಿ–ಪಕ್ಷಿಗಳು, ವಿಷಕಾರಿ ಸರ್ಪಗಳು, ಬರಿಗಣ್ಣಿಗೆ ಕಾಣಿಸದಷ್ಟು ಚಿಕ್ಕ ಅಣುಗಾತ್ರದ ಜೀವಿಗಳು ಇತ್ಯಾದಿ ಇತ್ಯಾದಿಗಳೆಲ್ಲವೂ ಸ್ವಯಂ ಅಸ್ತಿತ್ವಕ್ಕೆ ಬಂದವು ಮತ್ತು ಯಾರ ನಿಯಂತ್ರಣದಲ್ಲೂ ಇಲ್ಲದೆ ಸ್ವನಿಯಂತ್ರಣಕ್ಕೆ ಒಳಪಟ್ಟವುಗಳು ಎಂದು ಅವರು ಭಾವಿಸುತ್ತಿದ್ದಾರೆಯೇ? ಅಥವಾ ಇವುಗಳ ಸೃಷ್ಟಿಗಳಲ್ಲಿ ಒಬ್ಬನಿಗಿಂತಲೂ ಹೆಚ್ಚು ದೇವರುಗಳಿದ್ದು ಅವರೆಲ್ಲರೂ ರೌಂಡ್ ಟೇಬಲ್ ಕಾನ್ಫರೆನ್ಸ್ ಗಳನ್ನು ಮಾಡಿ ಇವೆಲ್ಲವುಗಳನ್ನೂ ನಿಯಂತ್ರಿಸುತ್ತಿದ್ದಾರೆಂದು ಅವರು ಹೇಳುತ್ತಿದ್ದಾರೆಯೇ?

ಅಲ್ಲಾಹನ ಅಸ್ತಿತ್ವ ಮತ್ತು ಏಕತ್ವವನ್ನು ಬಾರಿ ಬಾರಿಗೂ ಜ್ಞಾಪಿಸುವ ಮತ್ತು ಮನುಷ್ಯನಲ್ಲಿ ಚಿಂತನಾಶೀಲತೆಯನ್ನು ಪ್ರೋತ್ಸಾಹಿಸುವ ಎಷ್ಟೋ ವಚನಗಳು ಕುರ್‌ಆನ್‌ನಲ್ಲಿವೆ! ಒಬ್ಬ ದೇವನ ಕುರಿತು ಹೇಳಿಕೊಟ್ಟು ಅವನನ್ನು ಆರಾಧಿಸಬೇಕೆಂಬ ಅಂಧವಾದ ಅನುಕರಣೆಯನ್ನು ಕುರ್‌ಆನ್ ಪ್ರತಿಪಾದಿಸುವುದಿಲ್ಲ. ಬದಲಾಗಿ ಪ್ರಪಂಚದಲ್ಲಿ ನೀನು ದಿನನಿತ್ಯ ಕಾಣುವ ದೃಷ್ಟಾಂತಗಳ ಮೂಲಕ ನಿನ್ನ ಸೃಷ್ಟಿಕರ್ತನನ್ನು ಅರಿತುಕೊಳ್ಳಬೇಕೆಂಬ ವೈಜ್ಞಾನಿಕ ತತ್ವವನ್ನು ಕುರ್‌ಆನ್ ಪ್ರತಿಪಾದಿಸುತ್ತದೆ. ತನ್ಮೂಲಕ ಮನುಷ್ಯನ ಅಂತರಾಳದಲ್ಲಿ ಸುಪ್ತವಾಗಿರುವ ದೈವಿಕ ಪ್ರಜ್ಞೆಯನ್ನು ಕುರ್‌ಆನ್ ಜಾಗೃತಗೊಳಿಸುತ್ತದೆ.

ಒಬ್ಬ ಕವಿ ಹಾಡುತ್ತಾರೆ:

كَيْفَ يَعْصِى الْإِلَهَ ؛ وَيَجْحَدُهُ الْجَاحِدُ

وَفِي كُلِّ شَيْءٍ لَهُ آيَةٌ ؛ تَدُلُّ عَلَى أَنَّهُ وَاحِدُ

“ದೇವನನ್ನು ಧಿಕ್ಕರಿಲು ಅಥವಾ ನಿರಾಕರಿಸಲು ಹೇಗೆ ಸಾಧ್ಯ? ಪ್ರತಿಯೊಂದು ವಸ್ತುವಿನಲ್ಲೂ ಅವನು ಏಕನೆಂದು ಸೂಚಿಸುವ ದೃಷ್ಟಾಂತಗಳಿರುವಾಗ!”

ಸೃಷ್ಟಿಕರ್ತನನ್ನು ಕಂಡುಕೊಳ್ಳಬೇಕೆಂಬ ನಿಷ್ಕಳಂಕ ಉದ್ದೇಶವನ್ನು ಹೊಂದಿರುವ ಮನುಷ್ಯನಿಗೆ ಕುರ್‌ಆನ್ ಮಾರ್ಗದರ್ಶನ ನೀಡುತ್ತದೆ. ಕುರ್‌ಆನ್ ಹೇಳುವಂತೆ ಜನರು ದಿನನಿತ್ಯ ಅದೆಷ್ಟೋ ದೈವಿಕ ದೃಷ್ಟಾಂತಗಳ ಮೂಲಕ ಕಣ್ಣು ತೆರೆದು ಹಾದು ಹೋಗುತ್ತಿದ್ದಾರೆ. ಆದರೆ ಅದೇ ಸಮಯ ತಮ್ಮ ಒಳದೃಷ್ಟಿಗಳನ್ನು ತಮಗರಿವಿಲ್ಲ-ದಂತೆಯೇ ಅಂಧಕಾರಗಳಲ್ಲಿ ಹುಗಿದಿಟ್ಟಿರುತ್ತಾರೆ.

“ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವ (ಜಗತ್ತಿನಲ್ಲಿ-ರುವ) ಎಷ್ಟೆಷ್ಟು ದೃಷ್ಟಾಂತಗಳ ಮೂಲಕ ಅವರು ಹಾ-ದುಹೋಗುತ್ತಿದ್ದಾರೆ. ಆದರೂ ಅವರು ಅವುಗಳ ಬಗ್ಗೆ ನಿರ್ಲಕ್ಷ್ಯರಾಗಿದ್ದಾರೆ.” (ಕುರ್‌ಆನ್ 12/105)

ಸ್ವಲ್ಪವೂ ದೈವಿಕ ಪ್ರಜ್ಞೆಯಿಲ್ಲದ ಒಬ್ಬ ವ್ಯಕ್ತಿಯನ್ನು ಜಗತ್ತಿಗೆ ಸಮರ್ಪಿಸುತ್ತೇನೆಂದು ಪಣತೊಟ್ಟ ಫ್ರಾನ್ಸ್ ನ ಪ್ರಸಿದ್ಧ ನಾಸ್ತಿಕ ಸೆಂಟನಿ ಅದಕ್ಕಾಗಿ ಒಂದು ಮಗುವನ್ನು ಬಾಹ್ಯಲೋಕದ ಪರಿವೆಯೇ ಇಲ್ಲದ ರೀತಿಯಲ್ಲಿ ಬಂಧನದಲ್ಲಿಟ್ಟು ಬೆಳೆಸಿದನು. ತನ್ನ ಸಮಪ್ರಾಯದ ಯಾವುದೇ ಹುಡುಗರೊಂದಿಗೆ ಓಡಾಡಲು ಅವನು ಆ ಬಾಲಕನನ್ನು ಬಿಡಲಿಲ್ಲ. ಹೀಗಿರುವಾಗ ಒಂದು ದಿನ ಆ ಬಾಲಕ ಸೂರ್ಯನನ್ನು ನೋಡುತ್ತಾ, ಓ ಸೂರ್ಯ, ನೀನೆಷ್ಟು ಸುಂದರವಾಗಿದ್ದೀ! ನಿನ್ನನ್ನು ಸೃಷ್ಟಿಸಿದವನು ಇನ್ನೆಷ್ಟು ಸುಂದರನಾಗಿಬಹುದು!! ಎಂದು ಹೇಳುವುದನ್ನು ಕೇಳುವ ಅವಕಾಶ ಸೆಂಟನಿಗೆ ಒದಗಿ ಬಂದಿತ್ತು.

ನಾನು ನಿಮ್ಮ ಕೈಯಲ್ಲಿ ಒಂದು ಕ್ಯಾಮರಾ (Camera) ಕೊಟ್ಟು ಇದು ಆಕಸ್ಮಿಕವಾಗಿ ಉಂಟಾಗಿದೆ ಎಂದು ಹೇಳಿದರೆ ನೀವದನ್ನು ನಂಬುತ್ತೀರಾ? ಕ್ಯಾಮರಾ ನಿರ್ಮಿಸಲು ಒಂದು ಅದ್ಭುತವಾದ ಮೆದುಳಿನ ಅಸ್ತಿತ್ವ-

ವನ್ನು ನೀವು ನಿರಾಕರಿಸುವುದಿಲ್ಲ. ಹಾಗಾದರೆ ಯಾವ ಕಣ್ಣನ್ನು ಹಿನ್ನೆಲೆಯಾಗಿಟ್ಟು ಕ್ಯಾಮರಾವನ್ನು ನಿರ್ಮಿಸ-ಲಾಯಿತೋ ಆ ಕಣ್ಣನ್ನು ಮತ್ತು ಅದರ ಹಿನ್ನೆಲೆಯಲ್ಲಿ ತನ್ನ ಕೈಚಳಕವನ್ನು ಪ್ರದರ್ಶಿಸಿದ ಆ ಅದ್ಭುತ ಮೆದುಳು ಸೇರಿದಂತೆ ಅವನ ಸಂಪೂರ್ಣ ದೇಹವನ್ನು ಮತ್ತು ಅದು ವಾಸಿಸುವ ಈ ಅದ್ಭುತ ಜಗತ್ತನ್ನು ನಿರ್ಮಿಸಲು ಒಂದು ಅತಿಶ್ರೇಷ್ಠ ಬುದ್ಧಿಯನ್ನು (superior intelligence) ನೀವು ಹೇಗೆ ನಿರಾಕರಿಸುತ್ತೀರಿ?

ವಿಜ್ಞಾನಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟು ಅನೇಕ ಅದ್ಭುತ ಸಾಧನೆಗಳನ್ನು ಮಾಡಿದ ಅನೇಕ ವಿಜ್ಞಾನಿಗಳು ದೇವಾಸ್ತಿತ್ವವನ್ನು ಅಂಗೀಕರಿಸಿದ್ದರು. ದೇವಾಸ್ತಿತ್ವವನ್ನು ಅಂಗೀಕರಿಸಿದ ಹದಿನಾರು ಸುಪ್ರ-ಸಿದ್ಧ ವಿಜ್ಞಾನಿಗಳ ಹೇಳಿಕೆಗಳನ್ನು ಸಂಗ್ರಹಿಸಿ ಎಡ್ವರ್ಡ್ ಕ್ಯಾಟನ್ (Edward Catton) ಎಂಬವರು 'ವಿಜ್ಞಾ-ನವು ದೇವಾಸ್ತಿತ್ವವನ್ನು ಕಂಡುಕೊಂಡಿದೆಯೇ?' (Has

Science Discovered God?) ಎಂಬ ಮಹಾ ಪ್ರಬಂಧವನ್ನು ರಚಿಸಿದ್ದಾರೆ. ಕ್ಷುಲ್ಲಕ ವಿಚಾರಗಳನ್ನು ಮುಂದಿಟ್ಟು ದೇವಾಸ್ತಿತ್ವವನ್ನು ನಿರಾಕರಿಸುವವರಿಗೆ ಇದೊಂದು ಉತ್ತಮ ಅವಲೋಕನ ಗ್ರಂಥವಾಗಿದೆ.

ಕೊನೆಯದಾಗಿ, ನಾವು ನಮ್ಮ ಒಳದೃಷ್ಟಿಯನ್ನು ತೆರೆದರೆ ಖಂಡಿತವಾಗಿಯೂ ನಮಗೆ ಅಲ್ಲಾಹನ ಅಸ್ತಿತ್ವ ಮತ್ತು ಏಕತ್ವವು ಪ್ರಖರವಾಗಿ ಹೊಳೆಯುತ್ತಾ ಕಾಣುತ್ತದೆ. ಇದು ಕುರ್‌ಆನ್‌ನ ವಾಗ್ದಾನವಾಗಿದೆ.

“ನಿಮ್ಮ ಒಳದೃಷ್ಟಿಯನ್ನು ತೆರೆಸುವಂತಹ ಅನೇಕ ದೃಷ್ಟಾಂತಗಳು ನಿಮ್ಮ ಸೃಷ್ಟಿಕರ್ತನ ಕಡೆಯಿಂದ ನಿಮಗೆ ಬಂದಿವೆ. ಆದ್ದರಿಂದ ಯಾರಾದರೂ ತನ್ನ ಒಳದೃಷ್ಟಿಯನ್ನು ತೆರೆದು ನೋಡಿದರೆ ಅದರ ಒಳಿತು ಅವನಿಗೇ ಆಗಿದೆ. ಇನ್ನು ಯಾರಾದರೂ ಅಂಧನಾದರೆ ಅದರ ಕೆಡುಕು ಅವನಿಗೇ ಆಗಿದೆ. ನಾನಂತೂ ನಿಮ್ಮ ಮೇಲೆ ಕಾವಲುಗಾರನಾಗಿ ಇರುವವನಲ್ಲ.” (ಕುರ್‌ಆನ್ 6/104)

الحركة النصيحة الإسلامية

ANNASEEHA ISLAMIC MOVEMENT

SURATKAL, MANGALORE - 575 014

MOB: 9731593091 / 9945171612

Jamiyathe Ahle Hadees

Mangalore